ಅನುಯಾಯಿಗಳ ನಾಯಕರಾಗಿ ಸೇವೆ ಸಲ್ಲಿಸುವುದನ್ನು ನಿಷೇಧಿಸುತ್ತದೆ. ಉದಾಹರಣೆಗೆ, ಒಬ್ಬ ಮಹಿಳೆ ಎಂದಿಗೂ ಪೋಪ್ ಆಗಲು ಸಾಧ್ಯವಿಲ್ಲ!



**◆ ಲಲ್ಲೇಶ್ವರಿಯ ಅನುಭಾವಿಕ ಕಾವ್ಯ ಹಾಗೂ 12ನೇ ಶತಮಾನದ ಯೋಗಿನಿ ಅಕ್ಕ ಮಹಾದೇವಿಯ ವಚನಗಳು.. ಇವರಿಬ್ಬರ ಕಾವ್ಯ ಮತ್ತು ವ್ಯಕ್ತಿತ್ವದ ಮೇಲೆ ಕಾಶ್ಮೀರ ಶೈವ ದರ್ಶನದ ದಟ್ಟವಾದ ಪ್ರಭಾವವಿದೆ. ನಿಮಗೆ ಗೊತ್ತಿರುವ ಹಾಗೆ ಅದೊಂದು ಪ್ರಾಚೀನ ಶೈವ ತಾಂತ್ರಿಕ ಪಂಥ. ಸುಮ್ಮನೆ ಕುತೂಹಲಕ್ಕೆ ಕೇಳುತ್ತಿರುವೆ ಇವರನ್ನು ಅನುವಾದಿಸುವಾಗ ನೀವು ಎದುರಿಸಿದ ಸವಾಲುಗಳೇನು?**

ಕಾಶ್ಮೀರಿ ಶೈವವನ್ನು ನಾನು, ವಾಸ್ತವವನ್ನು ಅರ್ಥಮಾಡಿಕೊಳ್ಳಲು ಇರುವ ಅತ್ಯುನ್ನತ ತಾತ್ವಿಕ ಮಟ್ಟದ ಸಂಪ್ರದಾಯವೆಂದು ಪರಿಗಣಿಸುತ್ತೇನೆ. ಪಶ್ಚಿಮದಲ್ಲಿ ಕ್ರಿ.ಶ. 2ನೇ ಶತಮಾನದಲ್ಲಿ ಬಾಳಿ ಬದುಕಿದ ಪ್ಲಾಟಿನಸ್ ಇದೇ ರೀತಿಯ ಸತ್ಯಗಳನ್ನು ಸಾಧಿಸಿದ ಗ್ರೀಕ್ ತತ್ವಜ್ಞಾನಿ. ಲಲ್ಲೇಶ್ವರಿಯ ಪದ್ಯಗಳು ಈ ತತ್ವಶಾಸ್ತ್ರದ ಪ್ರಮುಖ ಪರಿಕಲ್ಪನೆಗಳನ್ನು ಸರಳವಾಗಿ ಸುಂದರವಾಗಿ ಅಭಿವ್ಯಕ್ತಿಸುತ್ತವೆ. ಅವನ್ನು ಪಶ್ಚಿಮಕ್ಕೆ ತಲುಪಿಸುವುದು ಮುಖ್ಯ ಅಂತ ನನಗನಿಸಿತು. ಭಾರತೀಯ ಸಂಪ್ರದಾಯವು ಬಹು ವೈವಿಧ್ಯಮಯವಾದ ತಾತ್ವಿಕ ಸಂಪತ್ತನ್ನು ಹೊಂದಿದೆ ಮತ್ತದನ್ನ ಪಾಶ್ಚಿಮಾತ್ಯರು ಇನ್ನೂ ಸರಿಯಾಗಿ ಕಂಡುಕೊಂಡಿಲ್ಲ ಅಥವಾ ಅವು ಪಶ್ಚಿಮಕ್ಕೆ ತಪ್ಪು ತಪ್ಪಾಗಿ ತಲುಪುತ್ತಿವೆ. ಲಲ್ಲಾ ಅನುವಾದದಲ್ಲಿ ನನಗೆ ಎರಡು ರೀತಿಯ ತೊಡಕುಗಳಿದ್ದವು. ಮೊದಲನೆಯದಾಗಿ, ಆಕೆಯ ಸಾಲುಗಳ ಸ್ವರೂಪವನ್ನು ಗೌರವಿಸುವುದರ ಜೊತೆಗೆ ಅವುಗಳ ನುಡಿಸಹಜ ಲಯ ಮತ್ತು ಅನುಭಾವಿಕ ತುರ್ತಿಗೆ ಚ್ಯುತಿ ತರದೇ ಇರುವುದು. ಅಂದರೆ ಆಧುನಿಕ ಕವಿತೆಗಳ ಕಟ್ಟುವ ಕ್ರಮವನ್ನು ಹಾಗೂ ಸಂವೇದನೆಯ ಸ್ವರೂಪವನ್ನು ಅನಗತ್ಯವಾಗಿ ಅದರ ಮೇಲೆ ಹೇರಲು ಹೋಗದಿರುವುದು. ಇನ್ನೊಂದು ಆಕೆಯ ಸಾಲುಗಳ ಅರ್ಥ, ಲಯವನ್ನು ಪ್ರತಿಯೊಬ್ಬರಿಗೂ ತಲುಪುವಂತೆ ಗ್ರಹಿಸಿ ಮನವರಿಕೆ ಮಾಡುವುದು. ಲಲ್ಲಾ ಬಯಸಿದ್ದು ಇದನ್ನೇ.

ಪಶ್ಚಿಮ ದೇಶಗಳಲ್ಲಿ, ಕಾಶ್ಮೀರಿ ಶೈವವು ಸಂಪೂರ್ಣವಾಗಿ ವಿಕೃತ ರೀತಿಯಲ್ಲಿ ಜನರನ್ನು ತಲುಪಿದೆ. ಅವರು ಅದರ ಲೈಂಗಿಕತೆಗೆ ಸಂಬಂಧಿಸಿದ ಅಂಶಕ್ಕೆ ಮಾತ್ರ ಮಹತ್ವ ಕೊಡಲು ಪ್ರಯತ್ನಿಸಿದ್ದಾರೆ. ಮತ್ತದು ಯಾಕೆಂದು ನಾನು ವಿವರಿಸಬಲ್ಲೆ. ಕ್ಯಾಥೋಲಿಕ್ ಪಂಥದಲ್ಲಿ, ಲೈಂಗಿಕತೆಯು ಅತ್ಯಂತ ಪಾಪದ, ಕೀಳರಿಮೆಯ ಕಲ್ಪನೆಯೊಂದಿಗೆ ಹೆಣೆದುಕೊಂಡಿದೆ. ಅದನ್ನೊಂದು ಬಗೆಯ Guilt ಎಂದು ಕರೆಯಬಹುದೇನೋ. ದೈವತ್ವವನ್ನು ತಲುಪಲು ಲೈಂಗಿಕತೆಯನ್ನು ಪವಿತ್ರ ಸಾಧನವಾಗಿ ಉನ್ನತೀಕರಿಸುವ ಶೈವ ದರ್ಶನದೊಂದಿಗೆ ತೊಡಗಿಸಿಕೊಳ್ಳುವುದು, ಅನೇಕರಿಗೆ ಈ ತಪ್ಪಿತಸ್ಥ ಪ್ರಜ್ಞೆಯಿಂದ ತಪ್ಪಿಸಿಕೊಳ್ಳುವ ದಾರಿಯಂತೆ ಕಾಣಿಸುತ್ತಿರಬೇಕು. ಸಮಸ್ಯೆ ಏನೆಂದರೆ ನಮ್ಮಲ್ಲಿ ಕೆಲವರು ಮಾತ್ರ ಶೈವ-ತಂತ್ರ ಫಿಲಾಸಫಿಯ ಸಾಧ್ಯತೆಯನ್ನು ಅಧ್ಯಯನ ಮಾಡಿದ್ದೇವೆ. ಅದಕ್ಕೆ ಸಂಬಂಧಿಸಿದ ಬೇಸಿಕ್ ಪಠ್ಯಗಳನ್ನು ಓದಿದ್ದೇವೆ. ಅದರ ಆಚರಣೆ ಕಷ್ಟವಾದರೂ, ನಮ್ಮ ಜೀವನ ಶೈಲಿಯಲ್ಲಿ ಅದನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದೇವೆ.

ಇಟಲಿಯ ಪ್ರಮುಖ ತಂತ್ರ ಸ್ಕಾಲರ್‌ಗಳಲ್ಲಿ ಒಬ್ಬರಾದ ಪ್ರೊ. ರಫೈಲೆ ತೊರೆಲ್ಲ ಅವರ ವಿಶ್ವ ವಿದ್ಯಾಲಯದಲ್ಲಿ ನಾನು ಕೆಲಕಾಲ ಅಧ್ಯಯನ ಮಾಡಿದ್ದೆ. ನನ್ನ 'ತಂತ್ರ' ಅನುಭವಗಳ ಬಗ್ಗೆ ಹೇಳುವುದಾದರೆ, ಅದು ಕೇವಲ ಬಾಹ್ಯ ಆಚರಣೆಗಿಂತ ಹೆಚ್ಚಾಗಿ ನನ್ನ ಒಳ ಪ್ರಪಂಚವನ್ನು ಬೆಳಗುವ ಒಂದು ರೀತಿಯ 'ಸಾಧನಾ' ಎಂದು ಹೇಳಬಹುದು. ಇದು ಪ್ರತಿಯೊಂದರಲ್ಲೂ ಇರುವ ರಹಸ್ಯ ಚೆಲುವು ಮತ್ತು ಪವಿತ್ರತೆಯನ್ನು ನೋಡಲು ಅನುವು ಮಾಡಿಕೊಡುವ ಜೀವನದ ಬಗೆಗಿನ ವಿಭಿನ್ನವಾದ ಅನುಸಂಧಾನವಾಗಿದೆ.

ನಾನೀಗ ಅಕ್ಕ ಮತ್ತು ಅದೇ ಶತಮಾನದಲ್ಲಿ ಜೀವಿಸಿದ್ದ ಇತರ ಭಕ್ತಿ ಕವಿಗಳ ಪಠ್ಯದ ಮೇಲೆ ಕೆಲಸ ಮಾಡಲು ಶುರು ಮಾಡಿದ್ದೀನಿ.ಆದರೆ ಅಕ್ಕ ಮಹಾದೇವಿಯ ವಚನಗಳ ಸ್ವರೂಪ ಸ್ವಲ್ಪ ಭಿನ್ನ. ಆಕೆ ಬಳಸಿದ ಸಾಹಿತ್ಯದ ಫಾರ್ಮ್ ಹೊಸದು ಅನ್ನುತ್ತೆ ಹಾಗೂ ಬೇರೆ ರೀತಿಯ ಅನುವಾದದ ಶಿಸ್ತನ್ನದು ಬೇಡುತ್ತದೆ.